# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜಗಳೂರು

## ಸಿ ಸಿ ನಂ:762/2021

## ಡಿಡಬ್ಲೂ-1

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.** **ದಿನಾಂಕ:07.11.2025**

| | | |
|---|---|---|
| ಹೆಸರು | : | ಭರತ್ ಕುಮಾರ್ ಜೆ ಹೆಚ್ ತಂದೆ ಬಿ ಎಸ್ ಹಾಲಪ್ಪ |
| ವಯಸ್ಸು | : | **30** ವರ್ಷ |
| ಉದ್ಯೋಗ | : | ಏನು ಇಲ್ಲ |
| ವಿಳಾಸ | : | ಬಸವೇಶ್ವರ ನಿಲಯ ,ರಾಮಾಲಯ ರಸ್ತೆ , ಜಗಳೂರು ಟೌನ್ |

**ಮುಖ್ಯ ವಿಚಾರಣೆ :** ಆರೋಪಿ **ಪರ ವಕೀಲರಿಂದ:**

ನನಗೆ ಪಿರ್ಯಾದಿಗೆ ಗೊತ್ತಿರುವುದಿಲ್ಲ . ಅವರನ್ನು ನ್ಯಾಯಾಲಯದಲ್ಲಿ ಈ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಬಂದಾಗ ಮಾತ್ರ ಮೊದಲ ಬಾರಿಗೆ ನೋಡಿದರುತ್ತೇನೆ . ನಾನು ಮತ್ತು ಪಿರ್ಯಾದಿ ಯಾವುದೇ ಹಣಕಾಸಿನ ವ್ಯವಹಾರ ಮಾಡಿರುವುದಿಲ್ಲ . ನಾನು ಯಾವುದೇ ಚೆಕ್ ನೀಡಿರುವುದಿಲ್ಲ . ನಾನು ಪಿರ್ಯಾದಿಯಲ್ಲಿ ತಿಳಿಸಿರುವ ಹಾಗೆ ನಾನು ದಿ: 18.04.2021 ರಂದು 5 ಲಕ್ಷ ಸಾಲ ಪಿರ್ಯಾದಿಯಿಂದ ಪಡೆದುಕೊಂಡಿರುವುದಿಲ್ಲ . ಪಿರ್ಯಾದಿ ನನ್ನ ವಿರುದ್ದ ಸುಳ್ಳು ಪಿರ್ಯಾದು ಸಲ್ಲಿಸಿರುತ್ತಾರೆ . ನಾನು ದಿ: 18.06.2021 ಎಂದು ನಮೂದಿಸಿ ಪಿರ್ಯಾದಿಗೆ ಯಾವುದೇ ಚೆಕ್ ನೀಡಿರುವುದಿಲ್ಲ . ನಿಪಿ 1 ಚೆಕ್ ನನ್ನದು ಇರುತ್ತದೆ , ಅದರಲ್ಲಿರುವ ಸಹಿ ನನ್ನದು ಇರುವುದಿಲ್ಲ . ನಿಡಿ 4 ಸಹಿಯು ಕೂಡ ನನ್ನದು ಇರುವುದಿಲ್ಲ . ಪಿರ್ಯಾದಿಯಲ್ಲಿ ತಿಳಿಸಿರುವ ಹಾಗೆ ನಿಪಿ 1 ಚೆಕ್ ಅನ್ನು ಪಿರ್ಯಾದಿಯ ಖಾತೆಗೆ ಸಲ್ಲಿಸಿ ಸಾಕಷ್ಟು ಹಣ ಇಲ್ಲ ಎಂದು ವಾಪಾಸಾಗಿರುತ್ತದೆ ಎಂದರೆ ಸುಳ್ಳು ಇರುತ್ತದೆ . ನನಗೆ ಪಿರ್ಯಾದಿಯಿಂದ ಯಾವುದೇ ನೋಟೀಸ್ ತಲುಪಿರುವುದಿಲ್ಲ .

ನಾನು ಜಗಳೂರು ಪಟ್ಟಣದ SBI ಬ್ಯಾಂಕಿನ ಬಳಿ ಎಸ್ ಪಿ ಬುಕ್ ಸ್ಟಾಲ್ ಅಂಗಡಿಯನ್ನು ನಡೆಸುತ್ತಿದ್ದೆ, ನಾನು ಸದರಿ ಅಂಗಡಿಯಲ್ಲಿ ಸಹಿ ಮಾಡದ ಖಾಲಿ ಚೆಕ್ ಗಳನ್ನು ಇಟ್ಟಿದ್ದೆ . ನಾನು ನನ್ನ ಸ್ನೇಹಿತರಾದ

ಮಂಜುನಾಥ ವಿವಿಸಿ ಮತ್ತು ಭರತ್ ರಾಜ್ ರವರುನನಗೆ ಸುಮಾರು 10 ವರ್ಷದಿಂದ ಸ್ನೇಹಿತರು ಇರುತ್ತಾರೆ . ಅವರು ನಮ್ಮ ಅಂಗಡಿ ಬಂದು ಹೋಗಿ ಮಾಡುತ್ತಿದ್ದರು . ಅವರು ನನ್ನ ಅಂಗಡಿಯಲ್ಲಿ ಸುಮಾರು 11 ಸಹಿ ಮಾಡದ ಚೆಕ್ ಗಳನ್ನು ಪಡೆದುಕೊಂಡು , ಅವುಗಳನ್ನು ದುರುಪಯೋಗ ಪಡಿಸಿಕೊಂಡು ಪ್ರಕರಣ ದಾಖಲು ಮಾಡುವುದಾಗಿ ನನಗೆ ಬೆದರಿಸಿರುತ್ತಾರೆ . ಈ ಬಗ್ಗೆ ನಾನು ಇದೇ ನ್ಯಾಯಾಲಯದಲ್ಲಿ ಪಿರ್ಯಾದಿ , ಮಂಜುನಾಥ ವಿ.ವಿ.ಸಿ , ಭರತ್ ರಾಜ್ ಜೆ ಪಿ ಮತ್ತು ಲೋಕೇಶ್ ಟಿ ಎ ರವರ ವಿರುದ್ದ ಖಾಸಗಿ ದೂರನ್ನು PCR 92/2022 ರಂತೆ ಸಲ್ಲಿಸಿರುತ್ತೇನೆ . ಪಿರ್ಯಾದಿಯು ಮೊದಲ ಬಾರಿಗೆ ನನ್ನ ವಿರುದ್ದ ದೂರನ್ನು ದಾಖಲಿಸಿರುತ್ತಾರೆ . ನಂತರ ಲೋಕೇಶ್ ಎಂಬುವವರ ಇದೇ ನ್ಯಾಯಾಲಯದಲ್ಲಿ ರೂ. 4 ಲಕ್ಷಕ್ಕೆ ಮತ್ತೊಂದು ಚೆಕ್ ಪ್ರಕರಣವನ್ನು ದಾಖಲಿಸಿರುತ್ತಾರೆ . ನಂತರ ಮಂಜುನಾಥ ವಿ.ವಿ.ಸಿ ಎಂಬುವವರ ಇದೇ ನ್ಯಾಯಾಲಯದಲ್ಲಿ ರೂ. 5 ಲಕ್ಷಕ್ಕೆ ಮತ್ತೊಂದು ಚೆಕ್ ಪ್ರಕರಣವನ್ನು ದಾಖಲಿಸಿರುತ್ತಾರೆ . ನಂತರ ಭರತ ರಾಜ್ ಎಂಬುವವರ ಇದೇ ನ್ಯಾಯಾಲಯದಲ್ಲಿ ರೂ. 5 ಲಕ್ಷಕ್ಕೆ ಮತ್ತೊಂದು ಚೆಕ್ ಪ್ರಕರಣವನ್ನು ದಾಖಲಿಸಿರುತ್ತಾರೆ . ನಾನು ಪಿರ್ಯಾದಿ ಮತ್ತು ಸದರಿಯವರಿಂದ ಯಾವುದೇ ಹಣವನ್ನು ಸಾಲವಾಗಿ ಪಡೆದುಕೊಂಡಿರುವುದಿಲ್ಲ . ಮಂಜುನಾಥ ವಿ.ವಿ.ಸಿ ಮತ್ತು ಭರತ್ ರಾಜ್ ಎಂಬುವವರು ನನ್ನ ಅಂಗಡಿಯಲ್ಲಿ ಇಟ್ಟಿದ್ದ ಚೆಕ್ ಗಳನ್ನು ದುರುಪಯೇಗ ಪಡಿಸಿಕೊಂಡು ಈ ಪ್ರಕರಣವನ್ನು ಸಲ್ಲಿಸಿರುತ್ತಾರೆ . ನನ್ನ ಮುಖ್ಯವಿಚಾರಣೆ ಸಂಬಂದವಾಗಿ ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿರುತ್ತೇನೆ .

ಸಾಕ್ಷಿ ಈಗ PCR 19/2022 ರ ದೃಢಿಕೃತ ಸಾಕ್ಷಿಗಳ 3 ಪ್ರಮಾಣ ಪತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ 5 ರಿಂದ 7 ಎಂದು ಗುರುತಿಸಲಾಯಿತು.

ಸಾಕ್ಷಿ ಈಗ ಗುನ್ನೆ ಸಂಖ್ಯೆ 103/2022 ರ ದೃಢಿಕೃತ ಪ್ರತಿಯನ್ನುಹಾಜರುಪಡಿಸಿದ್ದು , ಅದನ್ನು ನಿಡಿ 8 ಎಂದು ಗುರುತಿಸಲಾಯಿತು.

ಸಾಕ್ಷಿ ಈಗ PCR 19/2022 ರ ದೃಢಿಕೃತ ದೂರನ್ನು ಹಾಜರುಪಡಿಸಿದ್ದು ಅದನ್ನು ನಿಡಿ 9 ಎಂದು ಗುರುತಿಸಲಾಯಿತು.

ಸಾಕ್ಷಿ ಈಗ ದೃಡೀಕೃತ ಸ್ಥಳ ಪಂಚನಾಮೆಯನ್ನು ಹಾಜರುಪಡಿದ್ದು ಅದನ್ನು ನಿಡಿ 10 ಎಂದು ಗುರುತಿಸಲಾಯಿತು.

ಸಾಕ್ಷಿ ಈಗ ದೃಡೀಕೃತ ನಕಾಶೆಯನ್ನು ಹಾಜರುಪಡಿದ್ದು ಅದನ್ನು ನಿಡಿ 11 ಎಂದು ಗುರುತಿಸಲಾಯಿತು.

ಸಾಕ್ಷಿ ಈಗ ದೃಡೀಕೃತ 2 ಪೊಟೋಗಳನ್ನು ಹಾಜರುಪಡಿದ್ದು ಅದನ್ನು ನಿಡಿ 12 ಎಂದು ಗುರುತಿಸಲಾಯಿತು.

ಸಾಕ್ಷಿ ಈಗ ದೃಡೀಕೃತ 5 ಸಾಕ್ಷಿದಾರರ ಹೇಳಿಕೆಯನ್ನು ಹಾಜರುಪಡಿದ್ದು ಅವುಗಳನ್ನು ಕ್ರಮವಾಗಿ ನಿಡಿ 13 ರಿಂದ 17 ಎಂದು ಗುರುತಿಸಲಾಯಿತು.

ಸಾಕ್ಷಿಗ ಈಗ ದೃಡೀಕೃತ ಮಂಜುನಾಥ ವಿ ರವರ ಹೇಳಿಕೆಯನ್ನು ಹಾಜರುಪಡಿದ್ದು ಅದನ್ನು ನಿಡಿ 18 ಎಂದು ಗುರುತಿಸಲಾಯಿತು.

ಸಾಕ್ಷಿ ಈಗ ಪೋಲೀಸರು ಸಲ್ಲಿಸಿದ ಬಿ ರಿಪೋರ್ಟ್ ಗೆ ತಾನು ಸಲ್ಲಿಸಿದ ದೃಡೀಕೃತ ತಕರಾರನ್ನು ಹಾಜರುಪಡಿಸಿದ್ದು ಅದನ್ನು ನಿಡಿ 19 ಎಂದು ಗುರುತಿಸಲಾಯಿತು.

ಸಾಕ್ಷಿ ಈಗ ಲೋಕೇಶ್ ರವರು ನನ್ನ ವಿರುದ್ದ ಸಲ್ಲಿಸಿದ ಸಿಸಿ 25/2022 ರ ದೃಡೀಕೃತ ರೋಜನಾಮೆಯನ್ನು ಹಾಜರುಪಡಿದ್ದು ಅದನ್ನು ನಿಡಿ 20 ಎಂದು ಗುರುತಿಸಲಾಯಿತು.

ಸಾಕ್ಷಿ ಈಗ ಲೋಕೇಶ್ ರವರು ನನ್ನ ವಿರುದ್ದ ಸಲ್ಲಿಸಿದ ಸಿಸಿ 25/2022 ರ ದೃಡೀಕೃತ ಪಿರ್ಯಾದು ಅನ್ನು ಹಾಜರುಪಡಿದ್ದು ಅದನ್ನು ನಿಡಿ 21 ಎಂದು ಗುರುತಿಸಲಾಯಿತು.

ಸಾಕ್ಷಿ ಈಗ ಲೋಕೇಶ್ ರವರು ನನ್ನ ವಿರುದ್ದ ಸಲ್ಲಿಸಿದ ಸಿಸಿ 25/2022 ರ ದೃಡೀಕೃತ ಸಾಕ್ಷಿಯ ಹೇಳಿಕೆಯನ್ನು ಹಾಜರುಪಡಿದ್ದು ಅದನ್ನು ನಿಡಿ 22 ಎಂದು ಗುರುತಿಸಲಾಯಿತು.

ಸಾಕ್ಷಿ ಈಗ ಸಿಸಿ 25/2022 ರ ದೃಡೀಕೃತ 5 ದಾಖಲೆಗಳನ್ನು ಹಾಜರುಪಡಿದ್ದು ಅವುಗಳನ್ನು ಕ್ರಮವಾಗಿ ನಿಡಿ 23 ರಿಂದ 27 ಎಂದು ಗುರುತಿಸಲಾಯಿತು.

ಸಾಕ್ಷಿ ಈಗ ವಿ ಮಂಜುನಾಥರವರು ನನ್ನ ವಿರುದ್ದ ಸಲ್ಲಿಸಿದ ಸಿಸಿ 59/2022 ರ ದೃಡೀಕೃತ 8 ಪುಟಗಳ ರೋಜನಾಮೆಯನ್ನು ಹಾಜರುಪಡಿದ್ದು ಅದನ್ನು ನಿಡಿ 28 ಎಂದು ಗುರುತಿಸಲಾಯಿತು.

ಸಾಕ್ಷಿ ಈಗ ವಿ ಮಂಜುನಾಥರವರು ನನ್ನ ವಿರುದ್ದ ಸಲ್ಲಿಸಿದ ಸಿಸಿ 59/2022 ರ ದೃಡೀಕೃತ 6 ಪುಟಗಳ ಸಾಕ್ಷಿ ವಿಚಾರಣೆಯನ್ನು ಹಾಜರುಪಡಿದ್ದು ಅದನ್ನು ನಿಡಿ 29 ಎಂದು ಗುರುತಿಸಲಾಯಿತು.

ಸಾಕ್ಷಿ ಈಗ ವಿ ಮಂಜುನಾಥರವರು ನನ್ನ ವಿರುದ್ದ ಸಲ್ಲಿಸಿದ ಸಿಸಿ 59/2022 ರ ದೃಡೀಕೃತ 5 ದಾಖಲೆಗಳನ್ನು ಹಾಜರುಪಡಿದ್ದು ಅವುಗಳನ್ನು ಕ್ರಮವಾಗಿ ನಿಡಿ 30 ರಿಂದ 34 ಎಂದು ಗುರುತಿಸಲಾಯಿತು.

ಸಾಕ್ಷಿ ಈಗ ಭರತ್ ರಾಜ್ ರವರು ನನ್ನ ವಿರುದ್ದ ಸಲ್ಲಿಸಿದ ಸಿಸಿ 398/2022 ರ ದೃಡೀಕೃತ 2 ಪುಟಗಳ ರೋಜನಾಮೆಯನ್ನು ಹಾಜರುಪಡಿದ್ದು ಅದನ್ನು ನಿಡಿ 35 ಎಂದು ಗುರುತಿಸಲಾಯಿತು.

ಸಾಕ್ಷಿ ಈಗ ಭರತ್ ರಾಜ್ ರವರು ನನ್ನ ವಿರುದ್ದ ಸಲ್ಲಿಸಿದ ಸಿಸಿ 398/2022 ರ ದೃಡೀಕೃತ 2 ಪುಟಗಳ ಪಿರ್ಯಾದನ್ನು ಹಾಜರುಪಡಿದ್ದು ಅದನ್ನು ನಿಡಿ 36 ಎಂದು ಗುರುತಿಸಲಾಯಿತು.

ಸಾಕ್ಷಿ ಈಗ ಭರತ್ ರಾಜ್ ರವರು ನನ್ನ ವಿರುದ್ದ ಸಲ್ಲಿಸಿದ ಸಿಸಿ 398/2022 ರ ದೃಡೀಕೃತ 2 ಸಾಕ್ಷಿ ವಿಚಾರಣೆಯನ್ನು ಹಾಜರುಪಡಿದ್ದು ಅದನ್ನು ನಿಡಿ 37 ಎಂದು ಗುರುತಿಸಲಾಯಿತು.

ಸಾಕ್ಷಿ ಈಗ ಭರತ್ ರಾಜ್ ರವರು ನನ್ನ ವಿರುದ್ದ ಸಲ್ಲಿಸಿದ ಸಿಸಿ 398/2022 ರ ದೃಡೀಕೃತ 5 ದಾಖಲೆಗಳನ್ನು ಹಾಜರುಪಡಿದ್ದು ಅವುಗಳನ್ನು ಕ್ರಮವಾಗಿ ನಿಡಿ 38 ರಿಂದ 42 ಎಂದು ಗುರುತಿಸಲಾಯಿತು. ನನಗೆ ಪಿರ್ಯದಿ ಮತ್ತು ಸದರಿ ಮಂಜುನಾಥ ವಿ.ವಿ.ಸಿ , ಭರತ್ ರಾಜ್ ಜೆ ಪಿ ಮತ್ತು ಲೋಕೇಶ್ ಟಿ ಎ ರವರು ನನ್ನವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಹಿಂಸೆ ನೀಡಿರುತ್ತಾರೆ . ಸದರಿಯವರು ನನ್ನ ವಿರುದ್ದ ಸುಳ್ಳು ದಾಖಲೆ ಮತ್ತು ದೂರನ್ನು ಸಲ್ಲಿಸಿರುತ್ತಾರೆ . ನನಗೆ ಸದರಿ 4 ಜನರಿಗೆ ಹಣ ನೀಡಲು ಸಾಮರ್ಥ್ಯ ಇರುವುದಿಲ್ಲ . ನನಗೆ ಪಿರ್ಯಾದಿ ಮತ್ತು ಉಳಿದ ಮೂರು ಜನರಿಂದ ಹಣ ಪಡೆಯುವ ಅವಶ್ಯಕತೆ ಇರುವುದಿಲ್ಲ . ನನ್ನ ವ್ಯಾಪಾರ ಹಾಳು ಮಾಡಿರುತ್ತಾರೆ . 11 ಚೆಕ್ ಗಳನ್ನು ಮಂಜುನಾಥ ಮತ್ತು ಭರತ್ ರಾಜ್ ರವರು ದುರುಪಯೋಗ ಪಡಿಸಿಕೊಂಡಿರುತ್ತಾರೆ . ಪಿರ್ಯಾದಿಯು ಸಲ್ಲಿಸಿರುವ ಸುಳ್ಳು ಪ್ರಕರಣದಿಂದ

ನನ್ನ ಗೌರವಕ್ಕೆ ದಕ್ಕೆ ಆಗಿರುತ್ತದೆ .

( ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು , ಆಲಿಸಿ ಸಮಯ ನೀಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿರುತ್ತಾರೆ.)**

**ಓ ಹೇ ಕೇ ಸರಿ ಇದೆ**

**ಸಹಿ/-**

**ಪ್ರ.ದ.ನ್ಯಾ.ದಂ., ಜಗಳೂರು**